**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.**

**ಸಿ.ಸಿ. ನಂಬರ. 45/2025.**

ಫಿರ್ಯಾದಿ : ಕರ್ನಾಟಕ ಸರಕಾರ
ಹಳಿಯಾಳ ಪೋಲಿಸ ಠಾಣೆ, ಹಳಿಯಾಳ.

ವಿರುದ್ಧ

ಆರೋಪಿತ : ಭೀಮಸೇನ ಜಯಪ್ಪ ಮಾನೋಜಿ,
ವಯಸ್ಸು : 49 ವರ್ಷ, ವೃತ್ತಿ : ಚಾಲಕ ಕೆಲಸ,
ಸಾ : ಹಳಿಯಾಳ.

**ಆಪಾದನೆ**

ದಿನಾಂಕ 31-10-2024 ರಂದು ಮಧ್ಯಾಹ್ನ 03-35 ಗಂಟೆಗೆ ಹಳಿಯಾಳ ಪೋಲಿಸ ಠಾಣಾ ಸರಹದ್ದಿನ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವ ಹಳಿಯಾಳ-ದಾಂಡೇಲಿ ರಾಜ್ಯ ಹೆದ್ದಾರಿ ರಸ್ತೆ ಸಂಖ್ಯೆ 46 ನೇದ್ದರ ರಸ್ತೆಯಲ್ಲಿ ಕೆಸರೊಳ್ಳಿ ಕ್ರಾಸ್ ಹತ್ತಿರದ ತಿರುವು ರಸ್ತೆಯಲ್ಲಿ ಆರೋಪಿಯಾದ ನೀವು ಕೆ.ಎಸ್.ಆರ್.ಟಿ.ಸಿ ಬಸ್ ನಂಬರ ಕೆಎ-25/**F**/3374 ನೇದ್ದನ್ನು ದಾಂಡೇಲಿ ಕಡೆಯಿಂದ ಹಳಿಯಾಳ ಕಡೆಗೆ ಅತಿವೇಗವಾಗಿ ಮತ್ತು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಹೋಗಿ, ಹಳಿಯಾಳ ಕಡೆಯಿಂದ ದಾಂಡೇಲಿ ಕಡೆಗೆ ಮೋಟಾರ ಸೈಕಲ್ ನಂಬರ ಕೆಎ-25/**HJ**-2647 ನೇದ್ದನ್ನು ಚಲಾಯಿಸಿಕೊಂಡು ಬರುತ್ತಿದ್ದ ಪಿರ್ಯಾದಿಗೆ ನೀವು ಚಲಾಯಿಸುತ್ತಿದ್ದ ಬಸ್ಸಿನ ಬಲ ಬದಿಯ ಮುಂಭಾಗದಿಂದ ಡಿಕ್ಕಿ ಹೊಡೆದು, ಅಪಘಾತಪಡಿಸಿ, ಪಿರ್ಯಾದಿಯ ಬಲಕಾಲಿಗೆ ಮತ್ತು ಎದೆಗೆ, ತೀವ್ರ ಸ್ವರೂಪದ ಗಾಯವನ್ನುವುಂಟು ಪಡಿಸಿ, ಪಿರ್ಯಾದಿಯ ಮೋಟಾರ ಸೈಕಲ್ ಹಾಗೂ ನೀವು ಚಲಾಯಿಸುತ್ತಿದ್ದ ಬಸ್ಸಿನ ಮುಂದಿನ ಬಲ ಭಾಗದಲ್ಲಿ ಜಖಂಗೊಳಿಸಿ ಈ ಮೂಲಕ ನೀವು ಭಾ.ನ್ಯಾ.ಸಂ.ಕಲಂ 281 ಮತ್ತು 125(ಬಿ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾಗಿದೆ.

ಪ್ರಶ್ನೆ : ಈಗ ಓದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?
ಉತ್ತರ : ತಿಳಿದುಕೊಂಡಿದ್ದೇನೆ.

ಪ್ರಶ್ನೆ : ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ ?
ಉತ್ತರ : ವಿಚಾರಣೆಯಾಗಬೇಕು.

(ಆರೋಪಿತನಿಗೆ ಆಪಾದನೆಯ ಸಾರಾಂಶವನ್ನು ಆತನಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು.)

ಸ್ಥಳ : ಹಳಿಯಾಳ.

ದಿನಾಂಕ : **25-07-2025.** ಪ್ರ.ದ.ನ್ಯಾದಂ., ಹಳಿಯಾಳ.